ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/04/ಎಯುಡಿ/2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:19.01.2013

## ಸುತ್ತೋಲೆ

ವಿಷಯ: ಗ್ರಾಮ ಪಂಚಾಯತ್ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳ ತೀರುವಳಿಗೆ ಅಡ್‌ಹಾಕ್ ಸಮಿತಿ ಸಭೆ ಏರ್ಪಡಿಸುವ ಬಗ್ಗೆ

*****

ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993, ಸೆಕ್ಷನ್ 246(6) ಹಾಗೂ (7) ರನ್ವಯ ಗ್ರಾಮ ಪಂಚಾಯತಿಯ ಆಡಿಟ್ ವರದಿಗಳಲ್ಲಿನ ಆಕ್ಷೇಪಣೆಗಳ ತೀರುವಳಿ ಕುರಿತಂತೆ ಸರ್ಕಾರದ ಉಲ್ಲೇಖಿತ ಅಧಿಕೃತ ಜ್ಞಾಪನ ದಿನಾಂಕ: 14.05.2001 ರಲ್ಲಿ ಅಡ್‌ಹಾಕ್ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಕನಿಷ್ಟ ಮೂರು ತಿಂಗಳಿಗೊಮ್ಮೆ ಸಭೆ ಸೇರಿ, ಬಾಕಿ ಇರುವ ಆಡಿಟ್ ಆಕ್ಷೇಪಣೆಗಳನ್ನು ಶೀಘ್ರ ಇತ್ಯರ್ಥಪಡಿಸುವಂತೆ ಸೂಚಿಸಲಾಗಿದೆ. ಆದರೆ ಬಹಳಷ್ಟು ಕಡೆ ಸದರಿ ಅಡ್‌ಹಾಕ್ ಸಮಿತಿಯನ್ನು ಕಾಲಕಾಲಕ್ಕೆ ಏರ್ಪಡಿಸದೇ ಇರುವುದು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸಕ್ರಿಯವಾಗಿ ಭಾಗವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ತತ್ಪರಿಣಾಮವಾಗಿ, ಆಡಿಟ್ ವರದಿಗಳಲ್ಲಿನ ಅನೇಕ ಕಂಡಿಕೆಗಳು, ಆಕ್ಷೇಪಿತ ಮೊಬಲಗು ಹಾಗೂ ವಸೂಲಾತಿ ಮೊತ್ತ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗುತ್ತಿದೆ. ಆದ್ದರಿಂದ ಜಿಲ್ಲಾ ಪಂಚಾಯತ್ ಆಡಿಟ್ ಅಡ್‌ಹಾಕ್ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ರೀತಿಯಲ್ಲಿ ಗ್ರಾಮ ಪಂಚಾಯತಿ ಅಡ್‌ಹಾಕ್ ಸಮಿತಿಗಳನ್ನು ಸಹ ಪರಿಣಾಮಕಾರಿಯಾಗಿ ಸದೃಢಗೊಳಿಸಬೇಕಾಗಿದೆ. ಈ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಸೂಚಿಸಿದೆ.

1. ಪ್ರತಿಯೊಂದು ಗ್ರಾಮ ಪಂಚಾಯತಿಯ ತ್ರೈಮಾಸಿಕ ಅಡ್‌ಹಾಕ್ ಸಮಿತಿಯ ಸಭಾ ದಿನಾಂಕವನ್ನು ವರ್ಷದ ಆರಂಭದಲ್ಲಿ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯತಿವಾರು ನಿಗಧಿಪಡಿಸಿ ಆದೇಶ ಹೊರಡಿಸಬೇಕು.

2. ಪ್ರತಿಯೊಂದು ತ್ರೈಮಾಸಿಕ ಅಡ್‌ಹಾಕ್ ಸಮಿತಿ ಸಭೆಗೆ ಆಯಾ ತಾಲ್ಲೂಕಿನ ಕನಿಷ್ಟ 10–12 ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಬೇಕು.

3. ಪ್ರತಿಯೊಂದು ತಾಲ್ಲೂಕ್ ಪಂಚಾಯತಿಯಲ್ಲೂ ಅಡ್‌ಹಾಕ್ ಸಮಿತಿಯನ್ನು ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಕರೆಯತಕ್ಕದ್ದು. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ನಿಗಧಿಪಡಿಸಿದ ದಿನಾಂಕದಂದು ಆಯಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಸಭೆ ಕರೆಯತಕ್ಕದ್ದು.

4. ಅಡ್‌ಹಾಕ್ ಸಮಿತಿಯನ್ನು ಕರೆಯುವ ಮುನ್ನ ತಾಲ್ಲೂಕು ಪಂಚಾಯತಿಯ ಲೆಕ್ಕಾಧೀಕ್ಷಕರು ಮತ್ತು ಪಂಚಾಯತ್ ವಿಸ್ತರಣಾಧಿಕಾರಿಗಳು ಪೂರ್ವಭಾವಿ ಸಭೆ ನಡೆಸಿ, ಗ್ರಾಮ ಪಂಚಾಯತಿಗಳಲ್ಲಿ ಬಾಕಿ ಉಳಿದಿರುವ ಆಡಿಟ್ ಆಕ್ಷೇಪಣೆ/ಕಂಡಿಕೆಗಳಿಗೆ ಸಮರ್ಪಕ ಉತ್ತರಗಳನ್ನು ನೀಡಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಬೇಕು ಮತ್ತು ಕಾರ್ಯದರ್ಶಿಗಳಿಗೆ ಸೂಕ್ತ ಸಲಹೆ ಮಾರ್ಗದರ್ಶನ ನೀಡಬೇಕು.

5. ಕಾರ್ಯನಿರ್ವಾಹಕ ಅಧಿಕಾರಿಯು ಆಡಿಟ್ ಆಕ್ಷೇಪಣೆಗಳಿಗೆ ಗ್ರಾಮ ಪಂಚಾಯಿತಿ ಸಲ್ಲಿಸಿದ ಉತ್ತರ/ ವಿವರಣೆಗಳನ್ನು ಸೆಕ್ಷನ್ 246(7) ಮೇರೆಗೆ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಸಹಾಯಕ ನಿಯಂತ್ರಕರೊಂದಿಗೆ ಸಮಾಲೋಚಿಸಿ ಅವುಗಳನ್ನು ಅಂಗೀಕರಿಸುವ ಅಥವಾ ಮುಂದಿನ ಆಡಿಟ್‌ನಲ್ಲಿ ಪುನರ್ ಪರಿಶೀಲಿಸುವಂತೆ ಅಥವಾ ಸಮಂಜಸವಾದ ಉತ್ತರಗಳನ್ನು ಮರುಸಲ್ಲಿಸುವಂತೆ ನಿರ್ದೇಶನ ನೀಡಬೇಕು.

6. ಕಾನೂನುಬಾಹಿರ ವೆಚ್ಚಗಳು ಅಥವಾ ಹಣದುರುಪಯೋಗದ ಪ್ರಕರಣಗಳು ಇದ್ದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಯು ಸೂಕ್ತ ವಿಚಾರಣೆ ನಡೆಸಿ ಸಂಬಂಧಪಟ್ಟವರಿಂದ ವಿವರಣೆ ಪಡೆದು, ಸೆಕ್ಷನ್ 246(8) ಪ್ರಕಾರ ಅಂಥವರ ಮೇಲೆ ವೈಯಕ್ತಿಕ ಹೊಣೆ ಹೊರಿಸಿ ಶೇಕಡಾ 15ರಷ್ಟು ಬಡ್ಡಿಯೊಂದಿಗೆ ವಸೂಲಾತಿಗಾಗಿ ಸರ್ಚಾರ್ಜ್ ಆದೇಶ ಹೊರಡಿಸತಕ್ಕದ್ದು.

7. ಅಡ್‌ಹಾಕ್ ಸಮಿತಿ ಸಭೆಯಲ್ಲಿ ಬಾಕಿ ಇರುವ ಆಡಿಟ್ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಾರ್ಷಿಕ ತೀರುವಳಿಯು ಕನಿಷ್ಠ ಶೇಕಡಾ 50 ಕ್ಕಿಂತ ಕಡಿಮೆ ಇರದಂತೆ ಪ್ರಗತಿ ಆಗುವಂತೆ ನೋಡಿಕೊಳ್ಳಬೇಕು.

8. ಅಡ್‌ಹಾಕ್ ಸಮಿತಿ ಸಭೆಯಲ್ಲಿ ಕೈಗೊಂಡ ತೀರ್ಮಾನಗಳು ಹಾಗೂ ತೀರುವಳಿ ಪ್ರಗತಿ ಕುರಿತ ವರದಿಯನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಸಹಾಯಕ ನಿಯಂತ್ರಕರುಗಳಿಗೆ 03 ದಿನಗಳಲ್ಲಿ ಕಳುಹಿಸಬೇಕು. ತಾಲ್ಲೂಕು ಪಂಚಾಯತಿವಾರು ತೀರುವಳಿ ಪ್ರಗತಿಯನ್ನು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ಪ್ರತಿ ತಿಂಗಳ ಸಭೆಯಲ್ಲಿ ಪರಿಶೀಲಿಸಬೇಕು.

9. ಆಡಿಟ್ ಆಕ್ಷೇಪಣೆಗಳ ತೀರುವಳಿ ಬಗ್ಗೆ ನಿರ್ಲಕ್ಷ ತೋರುವ ಗ್ರಾಮಪಂಚಾಯತಿ ಕಾರ್ಯದರ್ಶಿಗಳಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಬೇಕು.

10. ಸೆಕ್ಷನ್ 246(11) ರ ಮೇರೆಗೆ, ರಾಜ್ಯಲೆಕ್ಕಪತ್ರ ಇಲಾಖೆಯ ನಿಯಂತ್ರಕರು ಗ್ರಾಮಪಂಚಾಯತಿ ಆಡಿಟ್ ಆಕ್ಷೇಪಣೆಗಳ ತೀರುವಳಿ ಕುರಿತಂತೆಯೂ ಉಸ್ತುವಾರಿ ನೋಡಿಕೊಳ್ಳುವುದರ ಜೊತೆಯಲ್ಲಿ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡಬೇಕು.

Rashmi V.

(ವಿ. ರಶ್ಮಿ)
ಸರ್ಕಾರದ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

<u>ಪ್ರತಿಯನ್ನು :–</u>

1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
2. ನಿಯಂತ್ರಕರು, ರಾಜ್ಯಲೆಕ್ಕಪತ್ರ ಇಲಾಖೆ, 6ನೇ ಮಹಡಿ, ಕಾವೇರಿಭವನ, ಬೆಂಗಳೂರು
3. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು
4. ಎಲ್ಲಾ ಜಿಲ್ಲೆಗಳ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಸಹಾಯಕ ನಿಯಂತ್ರಕರುಗಳು
5. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
6. ಎಲ್ಲಾ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು
7. ಮುಖ್ಯ ಸಂಪಾದಕರು. ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
8. ಹೆಚ್ಚುವರಿ ಪ್ರತಿಗಳು/ ಶಾಖಾ ರಕ್ಷಾ ಕಡತ